ಹಸುಗಳು ಏನೋ ರಣವಾಸನೆಯನ್ನು ಗ್ರಹಿಸಿದವುಗಳಂತೆ ರೋಮವನ್ನೂ ಬಾಲವನ್ನೂ ನಿಮಿರಿಸಿಕೊಂಡು ಭಯವನ್ನು ಹೊರಹಾಕುತ್ತಿದ್ದವು. ಮೇಯುವುದನ್ನು ಬಿಟ್ಟು ಎತ್ತೆತ್ತಲೋ ಓಡಲಾರಂಭಿಸಿದ್ದವು. ಕಾಳನೂ ಯಾವುದೋ ವಾಸನೆ ಹಿಡಿದವನಂತೆ ಕಾಳಿಂಗನ ಸಹಾಯದೊಂದಿಗೇ ಹೋಗುವವನಂತೆ ಒಂದೊಂದೇ ಹೆಜ್ಜೆ ಇಟ್ಟುಕೊಳ್ಳುತ್ತಾ ಹೋಗಿ, ಹುಲಿಯನ್ನು ಕಂಡು ಹೌಹಾರಿ ಬಾಲ ಮುದುರಿಕೊಂಡು ಹಿಂದೆ ಓಡಿಬಿಟ್ಟಿತು. ಕಾಳಿಂಗನಿಗೂ ರೋಮಾಂಚನವಾಗಿ ಮೈಯ ಕೂದಲುಗಳೆಲ್ಲ ಸಾವಿನ ಭಯದಿಂದ ನೆಟ್ಟಗಾಗಿಬಿಟ್ಟವು. ಆದರೆ ಬೇಟೆ ಪ್ರಾಣಿಯ ಎದುರು ಹೆದರಿ ಓಡಬಾರದು ಎಂಬ ಸೂತ್ರಕ್ಕೆ ಅನುಸಾರವಾಗಿ ನಿಂತ ಜಾಗವನ್ನು ಬಿಟ್ಟು ಕದಲಲಿಲ್ಲ. ಯಾವಾಗ ಅದು ಹಿಂಬಾಲಿಸಿ ಬರಲಿಲ್ಲವೋ ಆಗ ಮತ್ತೊಂದು ಹೆಜ್ಜೆ ಮುಂದೆ ಬಂದ ಕಾಳ ಒಂದೊಂದೇ ಕಳ್ಳಹೆಜ್ಜೆಗಳನ್ನಿಡುತ್ತ ಮೂಗಿನಿಂದ ಏನೇನನ್ನೋ ಆಘ್ರಾಣಿಸುತ್ತ ಬಂಗಾರದ ಬಣ್ಣದ ಹುಲಿರಾಯನನ್ನು ಕಂಡುಹಿಡಿದೇಬಿಟ್ಟಿತು.

ಹುಲಿ ಸತ್ತುಬಿದ್ದಿದೆ!

ಆದರೂ ಹುಲಿ ಸುಮ್ಮನೇ ಮಲಗಿದೆಯೋ, ನಿಜಕ್ಕೂ ಸತ್ತಿದೆಯೋ ಎಂದು ಪರಿಶೀಲಿಸಲೇ ಕಾಳ ದೊಡ್ಡ ಸರ್ಕಸ್ ಮಾಡಿತು. ಕೊನೆಗೆ ಅದರ ಬಾಯಿಯಿಂದ ಸೋರಿ ಹೆಪ್ಪುಗಟ್ಟಿದ್ದ ರಕ್ತವನ್ನೂ, ಹಿಂಭಾಗಕ್ಕೆ ಮಡಿಚಿಕೊಂಡಿದ್ದ ಮುಂಗಾಲನ್ನು ಕಂಡು ಸತ್ತಿರುವುದೇ ನಿಜವೆಂದು ಘೋಷಿಸಿಕೊಂಡು, ಮೆಲ್ಲಮೆಲ್ಲನೆ ಹೆಜ್ಜೆ ಇಡುತ್ತಾ, ಇನ್ನೂ ಅರೆ ಜೀವವಾಗಿರಬಹುದೇ ಎಂದು ಕೋಲಿನಿಂದ ತಿವಿಯುತ್ತ, ಅದು ನಿಶ್ಚಿಯವಾಗಿದೆ ಎಂದು ಖಾತ್ರಿಯಾದ ಮೇಲೆ ಬಂದ ಸಂಕಟ ತೊಲಗಿತು ಎಂದು ಸಂಭ್ರಮಪಟ್ಟುಕೊಂಡು ಮನೆಗೆ ಓಡೋಡಿ ಬಂದ ಕಾಳಿಂಗ. ಬಂದವನು ಮನೆಮಂದಿಯನ್ನೆಲ್ಲ, ಮನೆಕೆಲಸ ಮಾಡುತ್ತಿದ್ದ ಬಡಗಿಗಳನ್ನೆಲ್ಲ ಕರೆದುಕೊಂಡು ಹೋಗಿ ತೋರಿಸಿದ.

ಹೇಗೂ ಹೊಸ ಮನೆ ಕಟ್ಟಿಸುತ್ತಿದ್ದೀರಿ, ನಡುಮನೆಯ ಗೋಡೆಗೆ ಹಾಕುವಿರಂತೆ ಎಂದ ಆಳುಗಳು ಅದರ ಚರ್ಮವನ್ನು ಸುಲಿದು ಒಣಗಿಸಿ ಅದರ ಮುಖವನ್ನು ಹಾಗೇ ಉಬ್ಬಿರುವಂತೆ ರೂಪಿಸಿಕೊಟ್ಟರು.

ಕೊನೆಯ ಮಗ ಅಲ್ಲಿ ಇಲ್ಲಿ ಹೋಗಿ ಲಾವಣಿ, ತತ್ವಪದಗಳನ್ನು ಹಾಡಲು ಕಲಿತು ಬರುತ್ತಿದ್ದವನು ಪುಣ್ಯಕೋಟಿಯೇ ಹುಲಿಯನ್ನು ಪಶ್ಚಾತ್ತಾಪದಿಂದ ಕೊಂದುಕೊಳ್ಳುವಂತೆ ಮಾಡಿದ್ದು ಎನ್ನುವಂತೆ ರಾಗವಾಗಿ ಹಾಡು ಕಟ್ಟಿ ಹಾಡಿದ:\

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು||

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಬುತಾನೆಂತೆಂಬ ವ್ಯಾಘ್ರನು
ಗಬ್ಬಿತನದೊಳು ಬೆಟ್ಟದಾ ಅಡಿ
ಕಿಬ್ಬಿಯೊಳು ತಾನಿರುವನು||

ಸಿಡಿಲು ಘೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ಛಂಗನೆ
ತುಡುಕಿಯೆರಗಿದ ರಭಸ ಕಂಡು
ಚದುರಿಹೋದವು ಹಸುಗಳು||

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವಮಾಡಿಕೊಳ್ಳದೀಗ
ನುಸುಳಿಹೋದರೆ ಮತ್ತೆ ಬರುವೆಯ
ಹುಸಿಯನಾಡುವೆಯೆಂದಿತು|

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿರಕ್ತವಿದೆ ಕೋ
ಚಂಡ ವ್ಯಾಘ್ರನೇ ನೀನಿದೆಲ್ಲವ
ಉಂಡು ಸಂತಸದಿಂದಿರು||

ಪುಣ್ಯಕೋಟಿಯ ಮಾತ ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ಯೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು||

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ಏನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು||

ಎಂದಿತ್ಯಾದಿಯಾಗಿ ಹಾಡುತ್ತಾ ಕನ್ನಡ ನಾಡಿನ ಹಿರಿಮೆಯನ್ನು ಮೆರೆಸಿದ ಪುಣ್ಯಕೋಟಿಯ ಜೊತೆಗೆ ಎಲ್ಲ ಹಸುಕರುಗಳಿಗೂ ಮೈತೊಳೆದು ಸಿಂಗರಿಸಿ, ಹತ್ತಿರದಲ್ಲೇ ಸಿಕ್ಕುತ್ತಿದ್ದ ರಾಗಿ ತೆನೆ, ಭತ್ತದ ಗೊನೆಗಳನ್ನೇ ತಂದು ಮಾವಿನ ಸೊಪ್ಪು, ಹೊಂಬಾಳೆಗಳಿಂದ ಮನೆ ಕೊಟ್ಟಿಗೆಗಳನ್ನು ಅಲಂಕರಿಸಿ, ಸುಗ್ಗಿಯ ಜೊತೆಗೆ ಹುಲಿಯಿಂದ ದೊರೆತ ಗೆಲುವಿನ ಸಂತಸವನ್ನು ಎಲ್ಲರೂ ಸೇರಿ ಆಡಿ, ಹಾಡಿ ನಲಿದರು.

ಕೊಂಬೆ–6

ಆ ಕಾಲದಲ್ಲಿ ನನ್ನ ಸುತ್ತ ಎಷ್ಟೊಂದು ಮರಗಳಿದ್ದವಲ್ಲ, ಏನಾದವು ಅವೆಲ್ಲ? ಬರೀ ಮರಗಳೇ ಅವು? ಗಿಡಗಂಟೆ ಮುಳ್ಳು ಬಳ್ಳಿಗಳನ್ನೆಲ್ಲ ಒಳಗೊಂಡ ಕೋಟ್ಯಂತರ ಮರಗಳು. ಆ ಮರಗಳನ್ನೆಲ್ಲ ಸೇರಿಯೇ ಕಾಡು ಅನ್ನುತ್ತಾರಲ್ಲ. ಅವನ್ನೆಲ್ಲ ಯಾಕೆ ಈ ಮನುಷ್ಯ ಕಡಿದುಹಾಕಿದ? ಮೊದಮೊದಲು ಉರುವಲಿಗೆ ಅಂತ, ಬೇಸಾಯದ ಉಪಕರಣಕ್ಕೆ ಅಂತ, ಮನೆ ಕೊಟ್ಟಿಗೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಂತ. ನಂತರ ರೈಲು ಬಂದ ಮೇಲೆ ಅದರ ಬುಡಕ್ಕೆ ಹಾಕಬೇಕಂತ ಶುರುವಾದದ್ದು ಬ್ರಿಟಿಷರ ಕಾಲದಲ್ಲಿ. ಅಂಥ ಆಯ್ದ ಮರಗಳನ್ನು, ಮರದ ದಿಮ್ಮಿಗಳನ್ನು, ಲಾರಿಯಿಂದ ರೈಲಿಗೆ, ರೈಲಿನಿಂದ ಬಂದರಿನವರೆಗೆ ಸಾಗಿಸಿ ಅಲ್ಲಿಂದ ಹಡಗಿನ ಮೂಲಕ ವಿದೇಶಗಳಿಗೆ ಸಾಗಿಸುತ್ತಿದ್ದರು. ಅವರು ತಮಗೆ ಬೇಕಾದ್ದಷ್ಟೇ ಅಲ್ಲದೆ ಅವುಗಳನ್ನು ಬೇರೆ ಬೇರೆ ದೇಶಗಳಿಗೆ ಮಾರಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದರು. ಆಗೆಲ್ಲ ಈಗಿನಂತೆ ಕಾನೂನು ಬಿಗಿ ಇರಲಿಲ್ಲ. ಅವರಿಗೆ ಹೇಗೆ ಬೇಕೋ ಹಾಗೆ, ಅವರಿಗೆ ಅನುಕೂಲವಾಗುವಂಥ ಕಾನೂನುಗಳನ್ನು ಮಾಡಿಕೊಂಡಿದ್ದರು. ಕಾನೂನು ಮಾಡುತ್ತಿದ್ದವರೇ ಅವರಲ್ಲವೇ? ಅವರಿಗೆ ತಮ್ಮ ಅಗತ್ಯಗಳಿಗನುಗುಣವಾಗಿ ಮರಗಳನ್ನು ಕಡಿಯಲು, ಸಾಗಿಸಲು ಆಳುಗಳ ಕೊರತೆಯಿಂದಾಗಿ ಅದೇ ಹಣವನ್ನು ಸ್ಥಳೀಯರಿಗೆ ಕೊಟ್ಟು ಕೊಂಡುಕೊಂಡೂ ಹೊತ್ತೊಯ್ಯುತ್ತಿದ್ದರು. ಆದ್ದರಿಂದ ಅವರದ್ದೇ ಒಂದು ಮಾಫಿಯಾವೇ ಸೃಷ್ಟಿಯಾಗಿ ಇಡೀ ಕಾಡನ್ನೇ ಸರ್ವನಾಶ ಮಾಡಿದ್ದಾರೆ. ಅದರಲ್ಲೂ ನಮ್ಮ ಕಾಡಿನಲ್ಲಿ ಸುಗಂಧವನ್ನು ಬೀರುತ್ತಿದ್ದ ಗಂಧದ ಮರಗಳಂತೂ ವಿಫುಲವಾಗಿದ್ದವು. ಅದಕ್ಕೇ ನಮ್ಮ ನಾಡನ್ನು ಗಂಧದ ಗುಡಿ ಎಂದೇ ಕರೆಯುತ್ತಿದ್ದರು. ಅವುಗಳ ಬೆಲೆ ಜಾಸ್ತಿಯಿರುವುದರಿಂದ ಕೂಲಿಗಿಂತಲೂ ಲಾಭ ಜಾಸ್ತಿ ಸಿಗುತ್ತದೆ ಎಂದು, ಅದರ ಕಾಂಡ, ಕೊಂಬೆ, ರೆಂಬೆಗಳಿರಲಿ, ಅದರ ಬೇರುಗಳೂ ಸಿಗದಂತೆ ಬಗಿದು ಹಾಕಿದ್ದಾರೆ. ಒಂದು ಕಾಲದಲ್ಲಿ ನಮ್ಮೂರಿನ ಆ ಪಕ್ಕದಲ್ಲಿ ಗಂಧದೆಣ್ಣೆಯ ಕಾರ್ಖಾನೆಯನ್ನೇ ವಿಶ್ವೇಶ್ವರಯ್ಯನವರು ಕಟ್ಟಿಸಿದ್ದರು. ಅದರಿಂದ ಸುಗಂಧ ದ್ರವ್ಯವನ್ನು ತೆಗೆದು ಅದನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದರು. ಅದರ ಸಾರವನ್ನು ಮೈಸೂರು ಸ್ಯಾಂಡಲ್ ಸೋಪಿಗೆ ಬೆರೆಸುತ್ತಿದ್ದುದರಿಂದ ಅದು ಒಂದು ಔನ್ನತ್ಯವನ್ನೇ ಸಾಧಿಸಿತ್ತು. ಆದರೆ ಗಂಧದ ಕಳ್ಳರು ಅದನ್ನು ಹೇಗೆ ಹೇಗೆ ನಿರ್ನಾಮ ಮಾಡಿದರು ಗೊತ್ತೇ?

ನನ್ನ ಪಕ್ಕ ಏನು ಹರೀತಿದೆಯಲ್ಲ ಈ ನದಿ, ಇದನ್ನೇ ದಾರಿ ಮಾಡಿಕೊಂಡುಬಿಟ್ಟಿದ್ದರು. ಆಗೆಲ್ಲ ದಟ್ಟವಾದ ಕಾಡು ಇದ್ದುದರಿಂದ ಅಲ್ಲಿಗೆಲ್ಲ ಎತ್ತಿನ ಗಾಡಿಯನ್ನು ಹೊಡೆದುಕೊಂಡು ಹೋಗಿ, ಅವನ್ನು ಕತ್ತರಿಸಿ ಹೇರಿಕೊಂಡು ಬರುತ್ತಿದ್ದರು. ಆಮೇಲೆ ಲಾರಿಯನ್ನು ಮೇನ್ ರೋಡಿನವರೆಗೆ ತೆಗೆದುಕೊಂಡುಹೋಗಿ, ಎರಡು ಮೂರು ಜನ ಹೆಗಲ ಮೇಲೆ ಹೊತ್ತುಕೊಂಡು ಬಂದು ಲಾರಿಗೆ ಲೋಡ್ ಮಾಡುತ್ತಿದ್ದರು. ಎಲ್ಲವನ್ನೂ ಖಾಲಿ ಮಾಡಿ ಮುಗಿಸಿದ ಮೇಲೆ ಹತ್ತಿರದಲ್ಲೆಲ್ಲೂ ಇನ್ನು ಸಿಗಲಾರದೆಂದು ತಿಳಿದ ನಂತರ ಸಿಹಿವರ್ಣಾ ನದಿಯೊಳಗಿಂದ ಸಾಗಿಸಲು ಶುರುಮಾಡಿದರು. ಆ ಗಂಧದ ಕಳ್ಳರದ್ದೇ ಒಂದು ದೊಡ್ಡ ಗ್ಯಾಂಗ್ ಇತ್ತು. ಅವರೆಲ್ಲ ಗಂಧವನ್ನು ಮಾರಿ ಕೆಲವೇ ದಿನಗಳಲ್ಲಿ ಶ್ರೀಮಂತರೂ ಆಗಿಬಿಟ್ಟಿದ್ದರು. ಆ ಪುಗಸಟ್ಟೆ ದುಡ್ಡಿನಲ್ಲಿ ಕುಡಿದೂ ತಿಂದೂ ಇವರೇ ಒಂದೊಂದು ತೊಲೆಗಳಂತೆ, ಒಳ್ಳೆ ಖದೀಮರಂತೆ ಕಾಣುತ್ತಿದ್ದರು. ಅವರಿಗೆ ಒಳ್ಳೆಯದು ಅಂದರೇನು, ಕೆಟ್ಟದು ಅಂದರೇನು ಎಂಬುದೇ ತಿಳಿದಿರಲಿಲ್ಲ ಪಾಪ. ಕಡಿಯುವುದು, ಮಾರುವುದು, ತಿನ್ನುವುದು, ಕುಡಿಯುವುದು... ಇಷ್ಟೇ. ತಮ್ಮ ಹಾದಿಗೆ ಯಾರಾದರೂ ಅಡ್ಡ ಬಂದರೆ ಅವರನ್ನು ಕೊಲ್ಲುವುದಕ್ಕೂ ಹೇಸುತ್ತಿರಲಿಲ್ಲ. ಅದರಲ್ಲೂ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಇವರನ್ನು ಮಟ್ಟ ಹಾಕಲು ಏನೆಲ್ಲ ಪ್ರಯತ್ನ ಮಾಡಿದರೂ ಅವರ ಕಣ್ಣಿನಿಂದ ತಪ್ಪಿಸಿಕೊಂಡು ಸಾಗಿಸಿಬಿಡುತ್ತಿದ್ದರು. ಕಳೆದುಹೋದ ನಮ್ಮ ಕಾಡನ್ನು ವೃದ್ಧಿಸಲು